# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 18-10-2022

## ಹೋಕ್ರಾಣಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 72/2022 ಕಲಂ 457, 380 ಐಪಿಸಿ :-

ದಿನಾಂಕ 17/10/2022 ರಂದು 1245 ಗಂಟೆಗೆ ಫಿರ್ಯಾದಿ ಶ್ರೀ ದತ್ತಾತ್ರೀ ತಂದೆ ಗುಂಡಪ್ಪಾ ಗುಂಗೆ ವಯ 37 ವರ್ಷ ಜಾತಿ ಕೊಳಿ ಉ; ಮುಖ್ಯ ಶಿಕ್ಷಕರು ಸಾ; ಖೇರ್ಡಾ (ಬಿ) ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆಂದರೆ ಸುಮಾರು 3 ವರ್ಷಗಳಿಂದ ಲಿಂಗಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕ ಅಂತ ಕರ್ತವ್ಯ ನಿರ್ವಹಿಸುತ್ತಾ ಬಂದಿರುತ್ತಾರೆ ದಿನಾಂಕ 02/10/2022 ರಿಂದ 16/10/2022 ರ ವರೆಗೆ ದಸರಾ ರಜೆ ಇರುವದರಿಂದ ದಿನಾಂಕ 02/10/2022 ರಂದು ಶಾಲೆಗೆ ಬೀಗ ಹಾಕಿ ಹೊಗಿದ್ದು ಇರುತ್ತದೆ. ಹೀಗಿರುವಲ್ಲಿ ದಿನಾಂಕ 17/10/2022 ರಂದು ಮುಂಜಾನೆ 09-30 ಗಂಟೆಯ ಸುಮಾರಿಗೆ ಲಿಂಗಿ ಗ್ರಾಮದ ಶಾಲೆಯ ಅಡುಗೆ ಸಿಬ್ಬಂದಿಯವರಾದ ಪಾರ್ವತಿಬಾಯಿ ಗಂಡ ಮಾಹಾದು ರವರು ಫೋನ ಮಾಡಿ ಶಾಲೆಯ ಬಾಗಿಲಿನ ಬೀಗ ಮುರಿದಿದ್ದು ಇರುತ್ತದೆ. ಅಂತ ತಿಳಿಸಿದಾಗ ಮುಂಜಾನೆ 09-45 ಗಂಟೆಗೆ ಲಿಂಗಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬಂದು ನೊಡಲು ಶಾಲೆಯ ಬಾಗಿಲಿನ ಬೀಗ ಮುರಿದು ಒಳಗೆ ಇಟ್ಟಿದ ಅಕ್ಷರ ದಾಸೋಹದ ಗೋಧಿ ಚೀಲಗಳು ಹಾಗು ಅಕ್ಕಿಯ ಚೀಲಗಳು ಮತ್ತು ತೋಗರೆ ಬೆಳೆ ಚೀಲಗಳು ಹಾಗು ಎರಡು ಗ್ಯಾಸ ಸಿಲಿಂಡರಗಳು ಇದ್ದವು ಇದರಲ್ಲಿನ 40 ಕೆಜಿ ಉಳ್ಳ ಒಂದು ಗೋದಿ ಚೀಲ ಹಾಗು ಇಂಡಿಯನ್ ಕಂಪನಿಯ ಎರಡು ತುಂಬಿದ ಸಿಲಿಂಡರಗಳು ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಮಾರ್ಕೆಟ ಪೊಲೀಸ ಠಾಣೆ ಯು.ಡಿ.ಆರ್. 14/2022 ಕಲಂ 174 ಸಿಆರ್‌ಪಿಸಿ:-

ದಿನಾಂಕ 17-10-2022 ರಂದು 0930 ಗಂಟೆಗೆ ಫರ್ಯಾದಿ ಶ್ರೀಮತಿ ದ್ವಿಯ್ಯಕೃಪಾ ಗಂಡ ಸನ್ನಿಕುಮಾರ ಗಂಗೆನೂರ ವಯ 27 ವರ್ಷ ಜಾತಿ ಕ್ರಿಶ್ಚಿನ ಉ;ಮನೆ ಕೆಲಸ ಸಾ;ಈಡಗೇರಿ ಬೀದರ ರವರು ಠಾಣೆಗೆ ಹಾಜರಾಗಿ ಮೌಖಿಕ ಹೇಳಿಕೆ ನೀಡಿದರ ಸಾರಾಂಶವೆನAದರೆ, ಇವರ ಮದುವೆಯು ಈಗ ಸುಮಾರು 7 ವರ್ಷಗಳ ಹಿಂದೆ ಸನ್ನಿಕುಮಾರ ತಂದೆ ಗುರುದಾಸ ಗಂಗೆನೂರ ವಯ 31 ವರ್ಷ ಜಾತಿ ಕ್ರಿಶ್ಚಿನ ಉ;ಟೇಲರ ಕೆಲಸ ಸಾ;ಈಡಗೇರಿ ಬೀದರ ಇವರ ಜೊತೆ ಆಗಿದ್ದು, ಇವರಿಗೆ 6 ವರ್ಷದ ಒಂದು ಗಂಡು ಮಗು ಇರುತ್ತಾನೆ. ಗಂಡನಿಗೆ ಸರಾಯಿ ಕುಡಿಯುವ ಚಟ ಇರುತ್ತದೆ. ಗಂಡ ಹೆಂಡತಿರ ಮಧ್ಯೆ ಕೌಟಂಬಿಕ ವಿಷಯವಾಗಿ ತಕ್ಕರಾರು ಇದ್ದು ಫರ್ಯಾದಿಯು ಕೆಲವು ದಿವಸಗಳಿಂದ ಮಗನ ಜೊತೆ ನನ್ನ ತವರು ಮನೆ ಲಾಡಗೇರಿ ಬೀದರದಲ್ಲಿಯೇ ವಾಸವಿರುತ್ತಾರೆ. ಹಿಗಿರುವಲ್ಲಿ ದಿನಾಂಕ 17-10-2022 ರಂದು 0815 ಗಂಟೆಯ ಸುಮಾರಿಗೆ ಇವರ ಭಾವನ ಮಗನಾದ ರೋಹಿತ ಇವನು ಕರೆ ಮಾಡಿ ತಿಳಿಸಿದೆನಂದರೆ, ನಿಮ್ಮ ಗಂಡ ಸನ್ನಿಕುಮಾರ ರವರು ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆಂದು ತಿಳಿಸಿದ ಮೇರೆಗೆ ಹೋಗಿ ನೋಡಲಾಗಿ, ನನ್ನ ಗಂಡ ಸನ್ನಿಕುಮಾರ ರವರು ಒಳಗಿನಿಂದ ಬಾಗಿಲು ಕೊಂಡಿ ಹಾಕಿದ್ದು ಭಾವ ರಾಜಕುಮಾರ ರವರು ತಿಳಿಸಿದೆನಂದರೆ, ನಾನು ಮನೆಯ ಬಾಗಿಲು ಮುರಿದಿರುತ್ತೇನೆಂದು ತಿಳಿಸಿರುತ್ತಾರೆ. ನಂತರ ಮನೆಯ ಒಳಗೆ ಹೋಗಿ ನೋಡಲಾಗಿ, ನನ್ನ ಗಂಡ ಸನ್ನಿಕುಮಾರ ರವರು ಮನೆಯ ಬಾತರೋಮಿನಲ್ಲಿ ನೈಲಾನ ಹಗ್ಗ ದಿಂದ ನೇಣು ಹಾಕಿಕೊಂಡು ಮೃತಪಟ್ಟು ಜೊತಾಡುತ್ತಿದ್ದರು. ದಿನಾಂಕ 15-10-2022 ರಂದು 1700 ಗಂಟೆಯಿAದ 17-10-2022 ರಂದು 0800 ಗಂಟೆಯ ಅವಧಿಯಲ್ಲಿ ಯಾವುದೊ ವಿಷಯದಲ್ಲಿ ತನ್ನ ಮನ್ಸಿನ ಮೇಲೆ ಪರಿಣಾಮ ಮಾಡಿಕೊಂಡು ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆ. ಮರಣದ ಬಗ್ಗೆ ನನಗೆ ಯಾರ ಮೇಲೆ ಯಾವುದೇ ಸಂಶಯ ಇರುವುದಿಲ್ಲಾ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.